ಒಂದೂರಿನಲ್ಲಿ ವಿಶಾಲವಾದ, ಸುಂದರವಾದ ಒಂದು ಸರೋವರವಿತ್ತು. ಅದರಲ್ಲಿ ಒಂದು ಮೊಸಳೆ ಮತ್ತು ಏಡಿ ವಾಸವಾಗಿದ್ದವು. ಅವು ಪರಸ್ಪರ ಸಹಾಯ ಮಾಡಿಕೊಂಡು ಜೀವಿಸುತ್ತಿದ್ದವು. ಒಂದು ದಿನ ಮೊಸಳೆ ಏಡಿಯನ್ನು ಕುರಿತು – 'ಬಹಳ ದಿನಗಳಿಂದ ನನಗೆ ಬರೀ ಮೀನುಗಳನ್ನು ತಿಂದೂ ತಿಂದೂ ನನ್ನ ನಾಲಿಗೆಯ ರುಚಿಯೇ ಕೆಟ್ಟು ಹೋಗಿದೆ. ಬೇರೆ ಯಾವುದೇ ಪ್ರಾಣಿಗಳೂ ಸಿಗದೆ ಬೇಸರವಾಗಿದೆ. ಏನು ಮಾಡಬೇಕೆಂಬುದೇ ಹೊಳೆಯುತ್ತಿಲ್ಲ' ಎಂದಿತು. ಅದಕ್ಕೆ ಏಡಿ– 'ಗೆಳೆಯಾ ನೀನು ಬೇಸರ ಮಾಡಿಕೊಳ್ಳುವ ಅಗತ್ಯವಿಲ್ಲ. ಅದಕ್ಕೊಂದು ಉಪಾಯ ಮಾಡಿದರೆ ನಿನ್ನ ಬಯಕೆ ಈಡೇರುತ್ತದೆ. ನಾನಿರುವಾಗ ನೀನೇಕೆ ಚಿಂತೆ ಮಾಡುತ್ತೀಯಾ? ಸುಮ್ಮನಿರು' ಎಂದು ಹೇಳಿ ಕ್ಷಣ ಯೋಚಿಸುತ್ತ ಕುಳಿತಿತು. ನಂತರ ಅದು ಮೊಸಳೆಗೆ – 'ನೀನು ಈಗ ಒಂದು ಕೆಲಸ ಮಾಡು. ಸುಮ್ಮನೆ ಸತ್ತಂತೆ ಮಲಗಿ ಬಿಡು. ನಾನು ಇಲ್ಲಿಗೆ ಬರುವ ಎಲ್ಲಾ ಪ್ರಾಣಿಗಳಿಗೂ ಮೊಸಳೆ ಸತ್ತು ಹೋಗಿದೆ ಎಂದು ಹೇಳುತ್ತೇನೆ. ಆಗ ನೀನು ಬೇರೆ ಪ್ರಾಣಿಗಳನ್ನೂ ತಿನ್ನಬಹುದು' ಎಂದಿತು.

ಸ್ವಲ್ಪ ಸಮಯದಲ್ಲೇ ಆ ಸರೋವರದ ಬಳಿಗೆ ನೀರು ಕುಡಿಯಲೆಂದು ದಷ್ಟಪುಷ್ಟವಾದ ತೋಳವೊಂದು ಬಂದಿತು. ಆಗ ಏಡಿ ತೋಳಕ್ಕೆ 'ಮೊಸಳೆ ಸತ್ತು ಹೋಗಿದೆ. ನಾವಿಬ್ಬರೂ ಬಹಳ ಕಾಲದಿಂದ ಆಪ್ತಮಿತ್ರರಾಗಿದ್ದೆವು. ಈಗ ನಾನು ಒಂಟಿ, ಅನಾಥ' ಎನ್ನುತ್ತ ದುಃಖಿಸುವಂತೆ ನಾಟಕವಾಡಿತು. ಆದರೆ ಮೊಸಳೆ ಬಿದ್ದಿರುವ ರೀತಿಯನ್ನು ನೋಡಿ ತೋಳಕ್ಕೆ ಏಡಿ ಹೇಳಿದ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಅದರ ಬುದ್ಧಿ ಚುರುಕಾಯಿತು. ಸೂಕ್ಷ್ಮವಾಗಿ ಮತ್ತೊಮ್ಮೆ ಮೊಸಳೆಯನ್ನು ಗಮನಿಸಿದ ತೋಳ ಏಡಿಗೆ ಜೋರಾಗಿ ; 'ಮೊಸಳೆಗಳು ಸತ್ತರೆ ಅವುಗಳ ಬಾಲ ಅಲ್ಲಾಡುತ್ತಿರುತ್ತದಂತೆ, ಆದರೆ ಈ ಮೊಸಳೆಯ ಬಾಲ ಅಲ್ಲಾಡುತ್ತಿಲ್ಲವಲ್ಲ! ನಿಜವಾಗಿಯೂ ಸತ್ತಿದೆಯಾ?' ಎಂದು ಕೇಳಿತು. ಈ ಮಾತನ್ನು ಕೇಳಿಸಿಕೊಂಡ ಮೊಸಳೆ ಕೂಡಲೇ ತನ್ನ ಬಾಲವನ್ನು ಅಲ್ಲಾಡಿಸಲು ಪ್ರಾರಂಭಿಸಿತು. ಆಗ ತೋಳಕ್ಕೆ ಮೊಸಳೆಯ ನಿಜವಾದ ಉದ್ದೇಶ ಅರಿವಾಯಿತು. ಅದು ಅಲ್ಲಿ ಒಂದು ಕ್ಷಣವೂ ನಿಲ್ಲದೆ ಓಡಿಹೋಗಿ ತನ್ನ ಪ್ರಾಣವನ್ನು ರಕ್ಷಿಸಿಕೊಂಡಿತು.